‘ನನ್ನನ್ನು ಸ್ವತಂತ್ರಗೊಳಿಸಿದ್ದೀಯ, ನಿನಗಾಗಿ ನಾನು ಏನು ಮಾಡಬೇಕು ಹೇಳು’ ಎಂದು ಹಾವು ಇರುವೆಯನ್ನು ಕೇಳಿಕೊಂಡಿತು. ‘ನದಿಯ ಬಳಿ ಕುಳಿತಿರುವ ಕಪ್ಪೆಯನ್ನು ನೀನು ತಿನ್ನಬೇಕು; ಅದೇ ನೀ ನನಗೆ ಮಾಡಬೇಕಾದ ಸಹಾಯ’ ಎಂದು ಇರುವೆ ಹಾವಿಗೆ ಆಜ್ಞೆ ಮಾಡಿತು. ನದಿಯ ದಂಡೆಗೆ ಬಂದ ಹಾವು ಕಪ್ಪೆಯನ್ನು ನೋಡಿತು. ಕಪ್ಪೆಗೆ ಸುಳಿವು ಸಿಗದಂತೆ ಮೆಲ್ಲನೆ ಹರಿಯುತ್ತಾ ನೀರಿನಲ್ಲಿ ಇಳಿಯಿತು. ನೀರ ಒಳಗಿನಿಂದಲೇ ಕಪ್ಪೆಗೆ ಗೊತ್ತಾಗದಂತೆ ಹತ್ತಿರ ಹತ್ತಿರ ಸರಿದು ಹೆಡೆಯನ್ನು ಚಾಚಿ ಒಂದೇ ಏಟಿಗೆ ಕಪ್ಪೆಯನ್ನು ಹಿಡಿಯಿತು. ಅದು ಹಾವಾಡಿಗನ ಬುಟ್ಟಿಯಲ್ಲಿದ್ದ ಹಲ್ಲುಕಿತ್ತ ಹಾವಾದ್ದರಿಂದ ಕಪ್ಪೆಗೆ ವಿಷ ಏರಲಿಲ್ಲ. ಬದುಕಿ ಉಳಿಯಿತು. ಹಾವು ಇನ್ನೇನು ಅದನ್ನು ಅನಾಮತ್ತಾಗಿ ನುಂಗಬೇಕು ಎನ್ನುವಷ್ಟರಲ್ಲಿ ಇರುವೆಯನ್ನು ಕಂಡಿತು. ‘ಇರುವೆಯಣ್ಣ ಇರುವೆಯಣ್ಣಾ ನನ್ನನ್ನು ಹಾವಿನ ಬಾಯಿಂದ ಬದುಕಿಸು. ನೀನು ಹೇಳಿದಂತೆ ಮಾಡುತ್ತೇನೆ’ ಎಂದು ಪರಿಪರಿಯಾಗಿ ಬೇಡಿಕೊಂಡಿತು. ಆಗ ಇರುವೆ, ಕಪ್ಪೆಯನ್ನು ಬಿಡುವಂತೆ ಹಾವಿಗೆ ಸೂಚಿಸಿತು. ಹಾವು ಕಪ್ಪೆಯನ್ನು ನುಂಗದೆ ಹಾಗೇ ಬಿಟ್ಟಿತು. ‘ಈಗಲೇ ನೀರಿಗೆ ಧುಮುಕಿ, ನನ್ನ ಮರಿ ಇರುವ ನಡುಗಡ್ಡೆಯವರೆಗೆ ಈಜಿ ಅದನ್ನು ಸುರಕ್ಷಿತವಾಗಿ ಕರೆದು ತಾ’ ಎಂದು ಕಪ್ಪೆಗೆ ಆಜ್ಞೆ ಮಾಡಿತು. ಜುಳು ಜುಳು ಹರಿಯುವ ನೀರಲ್ಲಿ ಈಜಿ ಕಪ್ಪೆ ನಡುಗಡ್ಡೆ ಸೇರಿತು. ಮರಿ ಇರುವೆಯನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಜೋಪಾನವಾಗಿ ಈಜುತ್ತಾ ದಡಸೇರಿತು. ತಾಯಿ ಇರುವೆ ತನ್ನ ಮುದ್ದು ಕಂದಮ್ಮನನ್ನು ಪ್ರೀತಿಯಿಂದ ತಬ್ಬಿಕೊಂಡು ಮುತ್ತಿನ ಮಳೆಗರೆಯಿತು. ತನಗೆ ಸಹಾಯ ಮಾಡಿದ ಎಲ್ಲರಿಗೂ ಕೃತಜ್ಞತೆಗಳನ್ನು ತಿಳಿಸಿ ತನ್ನ ಗೂಡಿಗೆ ಮರಳಲು ಸಿದ್ಧವಾಯಿತು.

ಅಷ್ಟೊತ್ತಿಗೆ ಸರಿಯಾಗಿ ಅಣಬೆಗಳನ್ನು ಸಂಗ್ರಹಿಸಲು ಹೊರಟಿದ್ದ ಇರುವೆಗಳೆಲ್ಲ ಬಣ್ಣಬಣ್ಣದ ಅಣಬೆಗಳನ್ನು ಹೊತ್ತುಕೊಂಡು ನದಿ ದಂಡೆಯ ಅದೇ ದಾರಿಯಲ್ಲಿ ಸಾಗಿ ಬಂದವು. ತಾಯಿ ಇರುವೆ ತನ್ನ ಮರಿಯ ಜೊತೆ ಕಾಣೆಯಾಗಿದ್ದಕ್ಕೆ ಅವುಗಳಿಗೂ ಬೇಸರವಾಗಿತ್ತು. ಇದೀಗ ಆ ಇಬ್ಬರೂ ಸುರಕ್ಷಿತವಾಗಿರುವುದನ್ನು ಕಂಡು ಇರುವೆಗಳ ಗುಂಪು ಸಮಾಧಾನದಿಂದ ಸಂತೋಷಪಟ್ಟಿತು. ಇರುವೆಗಳ ಗುಂಪಿನ ಮುಖ್ಯಸ್ಥನ ಅಪ್ಪಣೆಯಂತೆ ತಾಯಿ ಮತ್ತು ಮರಿ ಇರುವೆಯನ್ನು ಸಾಲಿನಲ್ಲಿ ಮೊದಲು ಬಿಟ್ಟುಕೊಂಡು, ಅವೆರಡರ ಹಿಂದೆ ಎಲ್ಲ ಇರುವೆಗಳೂ ಸಾಲುಗಟ್ಟಿ ತಮ್ಮ ಗೂಡು ಸೇರಿದವು.

## ಹಿ.ಚಿ. ಬೋರಲಿಂಗಯ್ಯ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ, ಕುಲಸಚಿವರಾಗಿ, ಲಲಿತಕಲಾ ನಿಕಾಯ ಮತ್ತು ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಆಗಿ ಅಪಾರ ಆಡಳಿತಾತ್ಮಕ ಅನುಭವ ಇರುವ ಬೋರಲಿಂಗಯ್ಯ ಜಾನಪದ ವಿದ್ವಾಂಸರಾಗಿ ಮಹತ್ವದ ಕೆಲಸಗಳನ್ನು ಮಾಡಿದ್ದಾರೆ. 25ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರು ಇಟಲಿ, ಫ್ರಾನ್ಸ್, ಹಾಲೆಂಡ್ ಮತ್ತು ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಗೊಂಬೆಯಾಟ ಉತ್ಸವಗಳಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಬೋರಲಿಂಗಯ್ಯ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಿತ್ತಲಪುರ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.